# ಸಂಪರ್ಕ

ಬಿ.ಎಸ್.ಆರ.ಪಿ. ಸುದ್ದಿ ಪತ್ರ... **ಸಂಚಿಕೆ: 08** **ಜನವರಿ 2026**

## ಕ ರೈಡ್ ಹೌಸ್ ಜರ್ನಲ್

### ಕ ರೈಡ್ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಲಕ್ಷ್ಮಣ್ ಸಿಂಗ್



ಶ್ರೀ ಲಕ್ಷ್ಮಣ್ ಸಿಂಗ್ ದಿನಾಂಕ 01 ಡಿಸೆಂಬರ್ 2025 ರಂದು ಕೆ ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ (Managing Director) ಅಧಿಕಾರ ವಹಿಸಿಕೊಂಡರು. ಇವರು ಭಾರತೀಯ ರೈಲ್ವೇ ಇಂಜಿನಿಯರಿಂಗ್ ಸೇವೆ (IRSE)ಯ 1996ನೇ ಬ್ಯಾಚ್‌ನ ಅಧಿಕಾರಿ ಆಗಿದ್ದು, ಭಾರತೀಯ ರೈಲ್ವೆಯಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ.

ಇವರು ತಮ್ಮ ತಾಂತ್ರಿಕ ಪರಿಣಿತಿ ಮತ್ತು ಕಾರ್ಯತಂತ್ರದ ನಾಯಕತ್ವದಿಂದಾಗಿ ದೇಶಾದ್ಯಂತ ಹಲವು ಸಂಕೀರ್ಣ ಹಾಗೂ ಹೆಚ್ಚು ಪರಿಣಾಮ ಬೀರುವ ಮೂಲಸೌಕರ್ಯ ಯೋಜನೆಗಳ ಯಶಸ್ವಿ ಅನುಷ್ಠಾನ ಮಾಡಿದ್ದಾರೆ.

ತಮ್ಮ ವೃತ್ತಿಜೀವನದಲ್ಲಿ ಮೂಲಸೌಕರ್ಯ ಅಭಿವೃದ್ಧಿ, ಒಪ್ಪಂದ ನಿರ್ವಹಣೆ, ಕಾನೂನು ವ್ಯವಹಾರಗಳು, ಅತಿಕ್ರಮಣ ನಿರ್ವಹಣೆ, ಮಾನವ ಸಂಪನ್ಮೂಲಗಳು, ಬಜೆಟ್, ದಾಸ್ತಾನು ನಿಯಂತ್ರಣ ಹಾಗೂ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ಸರ್ಕಾರಗಳೊಂದಿಗೆ ಅಂತರ ಸಚಿವಾಲಯ ಸಮನ್ವಯ ಸೇರಿದಂತೆ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ.

### ಕೆಎಫ್‌ಡಬ್ಲ್ಯೂ ಮತ್ತು ಜರ್ಮನ್ ಸರ್ಕಾರದ ನಿಯೋಗದ ಭೇಟಿ



ಜರ್ಮನ್ ಅಭಿವೃದ್ಧಿ ಬ್ಯಾಂಕ್ KfW ಮತ್ತು ಏಷ್ಯಾದ ಬಿಎಂಜೆಡ್ (ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗಾಗಿ ಫೆಡರಲ್ ಸಚಿವಾಲಯ) ನ ಮಹಾನಿರ್ದೇಶಕಿ ಮಾನ್ಯ ಕ್ರಿಸ್ಟೀನ್ ಟೊಯೆಟ್ಸ್ಕೆ ಅವರನ್ನು ಒಳಗೊಂಡ ಜರ್ಮನಿ ಸರ್ಕಾರದ ನಿಯೋಗವು ಡಿಸೆಂಬರ್ 2, 2025 ರಂದು ಕೆ ರೈಡ್‌ನ ವ್ಯವಸ್ಥಾಪಕ ನಿರ್ದೇಶಕರನ್ನು ಭೇಟಿ ಮಾಡಿತು. ಈ ಸಂದರ್ಭದಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಯ ಪ್ರಸ್ತುತ ಅನುಷ್ಠಾನ ಸ್ಥಿತಿ, ಕಾಮಗಾರಿಗಳ ಪ್ರಗತಿ ಹಾಗೂ ನಿಗದಿತ ಕಾಲಮಿತಿಗಳನ್ನು ಪಾಲಿಸುವುದಕ್ಕಾಗಿ ಕೈಗೊಳ್ಳಲಾಗುತ್ತಿರುವ ಕ್ರಮಗಳ ಕುರಿತು ನಿಯೋಗಕ್ಕೆ ವಿವರವಾಗಿ ಮಾಹಿತಿ ನೀಡಲಾಯಿತು.

ಸಭೆಯಲ್ಲಿ ಯೋಜನೆಯ ಕಾಲಮಿತಿಗಳು ಮತ್ತು ಹಣಕಾಸು ಸಂಬಂಧಿತ ವಿಷಯಗಳ ಕುರಿತು ಚರ್ಚೆ ನಡೆಯಿತು. ಕೆ-ರೈಡ್ ಸಂಸ್ಥೆಗೆ ತಾಂತ್ರಿಕ ಪರಿಣಿತರನ್ನು ಪೂರ್ಣಕಾಲಿಕ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕ ಮಾಡಿರುವುದಕ್ಕೆ ನಿಯೋಗವು ತೃಪ್ತಿ ವ್ಯಕ್ತಪಡಿಸಿತು.

## ವ್ಯವಸ್ಥಾಪಕ ನಿರ್ದೇಶಕರ ಆಶಯ ನುಡಿ

### ಶುಭ ಕಾಮನೆಗಳೊಂದಿಗೆ!

ನಾನು ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಮುಂದಕ್ಕೆ ಕೊಂಡೊಯ್ಯುವ ಅಚಲವಾದ ನಂಬಿಕೆಯೊಂದಿಗೆ ಕೆ ರೈಡ್ ಸಂಸ್ಥೆಯ (KRIDE) ವ್ಯವಸ್ಥಾಪಕ ನಿರ್ದೇಶಕರಾಗಿ (ಎಂಡಿ) ಜವಾಬ್ದಾರಿಯನ್ನು ಸ್ವೀಕರಿಸಿದ್ದೇನೆ. ಬೆಂಗಳೂರು ನಗರದ ನಗರ ಸಾರಿಗೆ ವ್ಯವಸ್ಥೆಗೆ ಹೊಸ ರೂಪ ನೀಡುವ ಈ ಉಪನಗರ ರೈಲು ಯೋಜನೆಯನ್ನು ಮರಳಿ ಪಥ (TRACK)ಗೆ ತರುವುದೇ ನನ್ನ ಮುಖ್ಯ ಗುರಿಯಾಗಿದೆ.

ಕೆ ರೈಡ್ ಇದೀಗ ಒಂದು ನಿರ್ಣಾಯಕ ಹಂತದಲ್ಲಿದ್ದು, ಕೇಂದ್ರೀಕೃತ ಕಾರ್ಯಗತಗೊಳಿಸುವಿಕೆ, ಸಂಸ್ಥಾತ್ಮಕ ಸಮನ್ವಯ ಮತ್ತು ಸಮಯೋಚಿತ ನಿರ್ಧಾರಗಳು ಅತ್ಯಂತ ಅಗತ್ಯವಾಗಿವೆ. ಸುರಕ್ಷತೆ ಮತ್ತು ಹಣಕಾಸು ಶಿಸ್ತುಗಳನ್ನು ಕಾಪಾಡಿಕೊಂಡು ಯೋಜನೆಯ ಅನುಷ್ಠಾನವನ್ನು ವೇಗಗೊಳಿಸುವತ್ತ ನಮ್ಮ ಪ್ರಯತ್ನಗಳು ಕೇಂದ್ರೀಕೃತವಾಗಿವೆ. ಇರುವ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುವುದು, ಪ್ರಕ್ರಿಯೆಗಳ ಸರಳೀಕರಣ ಮತ್ತು ಎಲ್ಲಾ ಹಂತಗಳಲ್ಲಿ ಜವಾಬ್ದಾರಿತ್ವದ ಸಂಸ್ಕೃತಿಯನ್ನು ಬೆಳೆಸುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ.

ಈ ನಿಟ್ಟಿನಲ್ಲಿ ನಾನು ಈಗಾಗಲೇ ಕಾರಿಡಾರ್-2 ಹಾಗೂ ಕಾರಿಡಾರ್-4ರಲ್ಲಿ ಕಟ್ಟುನಿಟ್ಟಾದ ಪರಿಶೀಲನೆಗಳನ್ನು ಆರಂಭಿಸಿದ್ದೇನೆ. ಭೂ ಸ್ವಾಧೀನ ಸಮಸ್ಯೆಯನ್ನು ಪರಿಹಾರಗೊಳಿಸುವುದು ನಮ್ಮ ಪ್ರಮುಖ ಗುರಿಗಳಲ್ಲೊಂದಾಗಿದೆ. ಕಾರಿಡಾರ್-2ರ ಸಿವಿಲ್ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದ್ದು, ಕಾರಿಡಾರ್-4ರ ಸಂಬಂಧಿತ ಟೆಂಡರ್ ಅನ್ನು ಶೀಘ್ರದಲ್ಲೇ ಆಹ್ವಾನಿಸಲಾಗುವುದು. ಕರ್ನಾಟಕ ಸರ್ಕಾರ, ಭಾರತೀಯ ರೈಲ್ವೆ, ಹಣಕಾಸು ಒದಗಿಸುವ ಸಂಸ್ಥೆಗಳು ಹಾಗೂ ಗುತ್ತಿಗೆದಾರರನ್ನು ಒಳಗೊಂಡಂತೆ ಬಹು ಪಾಲುದಾರರೊಂದಿಗೆ ಸಹಕಾರಾತ್ಮಕ ಸಂವಹನ ನಡೆಸುವ ನಿಟ್ಟಿನಲ್ಲಿ ಮಹತ್ತರ ಹೆಜ್ಜೆಯನ್ನಿಟ್ಟಿದ್ದೇವೆ.

ಕೆ ರೈಡ್ ನ ಕರ್ತವ್ಯ ಕೇವಲ ರೈಲು ಮೂಲಸೌಕರ್ಯ ನಿರ್ಮಾಣವಲ್ಲ, ಸಾರ್ವಜನಿಕರು ಹಾಗೂ ಸರ್ಕಾರದ ವಿಶ್ವಾಸವನ್ನು ನಿರ್ಮಿಸುವುದೂ ಆಗಿದೆ. ದೇಶದಾದ್ಯಂತ ಇಂತಹ ಅನೇಕ ಯೋಜನೆಗಳಿಗೆ ಅನುಮೋದನೆ ದೊರೆಯಲು ಇದೇ ಒಂದು ಮಾನದಂಡವಾಗುವಂತೆ ಮಾಡುವುದು ನಮ್ಮ ಆದ್ಯತೆಯಾಗಿದೆ. ವಿಳಂಬಗಳನ್ನು ಜಯಿಸುವ ಮೂಲಕ ಉತ್ತಮ ಗುಣಮಟ್ಟವನ್ನು ಸಹ ಒದಗಿಸಬಹುದೆಂಬುದನ್ನು ನಮ್ಮ ಕಾರ್ಯಗಳಿಂದ ನಾವು ಸಾಬೀತುಪಡಿಸುತ್ತೇವೆ ಎಂಬ ವಿಶ್ವಾಸ ನನಗಿದೆ.

ಒಟ್ಟಾಗಿ, ಬೆಂಗಳೂರು ನಗರದ ನಾಗರಿಕರ ಜೀವನಮಟ್ಟವನ್ನು ಗಣನೀಯವಾಗಿ ಸುಧಾರಿಸುವ ವಿಶ್ವಾಸಾರ್ಹ, ಪರಿಣಾಮಕಾರಿ ಮತ್ತು ಸುಸ್ಥಿರ ಉಪನಗರ ರೈಲು ವ್ಯವಸ್ಥೆಯನ್ನು ಒದಗಿಸುವುದಕ್ಕೆ ನಾವು ಬದ್ಧರಾಗಿದ್ದೇವೆ. ಈ ದೃಷ್ಟಿಕೋನವನ್ನು ವಾಸ್ತವವಾಗಿಸಲು ಒಗಟ್ಟಿನ ಪ್ರಯತ್ನಗಳನ್ನು ನಾನು ನಿರೀಕ್ಷಿಸುತ್ತಿದ್ದೇನೆ.



**ಶ್ರೀ ಲಕ್ಷ್ಮಣ್ ಸಿಂಗ್,**
**ವ್ಯವಸ್ಥಾಪಕ ನಿರ್ದೇಶಕರು, ಕ ರೈಡ್**

# ಭೇಟಿಗಳು ಮತ್ತು ಪರಿಶೀಲನೆಗಳು



ಕ ರೈಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಡಿಸೆಂಬರ್ 3 2025ರಂದು ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಮಾನ್ಯ ಸಚಿವರಾದ ಡಾ|| ಎಂ.ಬಿ. ಪಾಟೀಲರನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಸಚಿವರು, ಬೆಂಗಳೂರು ಉಪನಗರ ರೈಲು ಯೋಜನೆ (BSRP) ಕರ್ನಾಟಕದ ನಾಗರಿಕರಿಗೆ ಗೇಮ್‌ಚೇಂಜರ್ ಆಗಿದ್ದು, ಯೋಜನೆಯನ್ನು ಅತಿ ಶೀಘ್ರವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಪ್ರಯತ್ನಗಳು ಸಾಗಲಿ ಎಂದು ಸೂಚಿಸಿದರು.



ಕ ರೈಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಡಿಸೆಂಬರ್ 1, 2025ರಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳೂ ಹಾಗೂ ಕ ರೈಡ್ ಮಂಡಳಿಯ ಅಧ್ಯಕ್ಷರಾಗಿರುವ ಡಾ|| ಶಾಲಿನಿ ರಜನೀಶ್, ಭಾ.ಆ.ಸೆ ಅವರನ್ನು ಭೇಟಿ ಮಾಡಿದರು. ಈ ವೇಳೆ, ಬೆಂಗಳೂರು ಉಪನಗರ ರೈಲು ಯೋಜನೆಯ ವೇಗವಾದ ಪ್ರಗತಿ ಮತ್ತು ಸಮಯಬದ್ಧ ಅನುಷ್ಠಾನದ ಮಹತ್ವದ ಬಗ್ಗೆ ಮುಖ್ಯ ಕಾರ್ಯದರ್ಶಿಗಳೂ ಮಾಹಿತಿಯನ್ನು ಹಂಚಿಕೊಂಡರು.



ಕ ರೈಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಡಿಸೆಂಬರ್ 1,2025ರಂದು ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿ ನಾಥ್, ಭಾ.ಆ.ಸೆ ಅವರನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವ ಕುರಿತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಸಲಹೆ ಸೂಚನೆ ನೀಡಿದರು.





ಕ ರೈಡ್ ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಡಿಸೆಂಬರ್ 3, 2025ರಂದು, ಕಾರಿಡಾರ್-2 ( ಮಲ್ಲಿಗೆ ಲೈನ್)ರ ಯಶವಂತಪುರ ನಿಲ್ದಾಣದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಕೆ ರೈಡ್ ಅಧಿಕಾರಿಗಳು, ಸಾಮಾನ್ಯ ಸಲಹೆಗಾರರು (GC) ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.





ಕ ರೈಡ್ ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಡಿಸೆಂಬರ್ 8, 2025 ರಂದು, ಚೈನೇಜ್ 15+500 (ಪಿ-151, ಮತ್ತಿಕೆರೆ) ರಿಂದ ಚೈನೇಜ್ 11.230 (ಪಿ-1, ಹೆಬ್ಬಾಳ) ವರೆಗೆ ಇರುವ ಎಲಿವೇಟೆಡ್ ಭಾಗದ ಪರಿಶೀಲನೆಯನ್ನು ನಡೆಸಿದರು. ಈ ಎಲಿವೇಟೆಡ್ ವಿಭಾಗವು 4.27 ಕಿಮೀ ಉದ್ದವನ್ನು ಹೊಂದಿದ್ದು, ಒಟ್ಟು 25.349 ಕಿಮೀ ಉದ್ದದ ಕಾರಿಡಾರ್-2 (ಮಲ್ಲಿಗೆ ಮಾರ್ಗ)ದ ಭಾಗವಾಗಿದೆ. ಇದು ಜನದಟ್ಟನೆಯ ನಗರ ಪ್ರದೇಶದ ಮೂಲಕ ಹಾದು ಹೋಗುತ್ತದೆ. ಸ್ಥಳಾವಕಾಶದ ಮಿತಿಯನ್ನು ಪರಿಹರಿಸಲು, ಯೋಜಿತ ಪ್ರಸ್ತಾವನೆಯಲ್ಲಿ ಮತ್ತಿಕೆರೆ ಮತ್ತು ಲೊಟ್ಟೆಗೊಲ್ಲಹಳ್ಳಿ ನಡುವೆ 1.281 ಕಿಮೀ ಉದ್ದದ ಡಬಲ್ ಡೆಕ್ಕರ್ ರಚನೆಯನ್ನು ಒಳಗೊಂಡಿದೆ. ಅಂದರೆ
ಮಟ್ಟ-1: ಬಿಬಿಎಂಪಿ ರಸ್ತೆ
ಮಟ್ಟ-2: ಬಿಎಸ್‌ಆರ್‌ಪಿ ರೈಲು ಮಾರ್ಗವನ್ನು ಒಳಗೊಂಡಿರುತ್ತದೆ.

(ಮುಂದುವರಿದಿದೆ)

# ಭೇಟಿಗಳು ಮತ್ತು ಪರಿಶೀಲನೆಗಳು



ಕ ರೈಡ್ ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಡಿಸೆಂಬರ್ 17, 2025ರಂದು, ಬಿಎಸ್‌ಆರ್‌ಪಿ ಕಾರಿಡಾರ್-2 (ಮಲ್ಲಿಗೆ ಮಾರ್ಗ)ರ ಹೆಬ್ಬಾಳ ಮತ್ತು ಕನಕನಗರ ನಡುವಿನ ನೆಲಮಟ್ಟದ (ಅಟ್ ಗ್ರೇಡ್) ವಿಭಾಗದ ಪರಿಶೀಲನೆಯನ್ನು ನಡೆಸಿದರು. 4.93 ಕಿಮೀ ವರೆಗೂ ನಡೆದ ಪರಿಶೀಲನೆ ಸಂದರ್ಭದಲ್ಲಿ ಒಡ್ಡು ಕಾಮಗಾರಿಗಳು, ಭೂ ಸಂರಕ್ಷಣಾ ರಚನೆಗಳು (ERS), ಸಣ್ಣ ಸೇತುವೆಗಳು, ರೈಲ್ವೆ ಕೆಳ ಸೇತುವೆಗಳು(RUBs), ಮುಖ್ಯ ಸೇತುವೆಗಳ ನಿರ್ಮಾಣ ಹಾಗೂ ಬಿಎಸ್‌ಆರ್‌ಪಿ ಮತ್ತು ಭಾರತೀಯ ರೈಲ್ವೇ ಮಾರ್ಗಗಳಿಗಾಗಿ ರೂಪರೇಖೆ ಪರಿಸುವ ಕಾರ್ಯಗಳ ಪ್ರಗತಿಯನ್ನು ಪರಿಶೀಲಿಸಲಾಯಿತು. ಈ ವೇಳೆ ಕೆ ರೈಡ್‌ನ ಅಧಿಕಾರಿಗಳು, ಸಾಮಾನ್ಯ ಸಲಹೆಗಾರರು (GC) ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.
ಇದೇ ವೇಳೆ, ಆರು ಲೆವೆಲ್ ಕ್ರಾಸಿಂಗ್‌ಗಳನ್ನು ರದ್ದುಗೊಳಿಸುವ ಉದ್ದೇಶದೊಂದಿಗೆ 2.50 ಕಿಮೀ ಉದ್ದ ಮಾರ್ಗದ ಅಲೈನ್‌ಮೆಂಟ್ ಮತ್ತು ನಿಲ್ದಾಣಗಳ ಸ್ಥಳಗಳ ಸಾಧ್ಯತೆಯ ಕುರಿತು ಚರ್ಚೆ ನಡೆಸಲಾಯಿತು. ಇದರಿಂದ ಸುರಕ್ಷತೆ ಹಾಗೂ ಕಾರ್ಯಾಚರಣಾ ದಕ್ಷತೆಯನ್ನು ಹೆಚ್ಚಿಸಬಹುದಾಗಿದೆ.



ಕ ರೈಡ್ ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಡಿಸೆಂಬರ್ 22, 2025ರಂದು, ಮುಕ್ತಿನಗರ (ಎಲ್‌ಸಿ-140)ದಿಂದ ಬಾಣಸವಾಡಿವರೆಗೆ ಬಿಎಸ್‌ಆರ್‌ಪಿ ಕಾರಿಡಾರ್-2 ರ ಕಾಮಗಾರಿ ಪರಿಶೀಲನೆ ನಡೆಸಿದರು. ಅಂದರೆ ಚೈನೇಜ್ 6.300 ರಿಂದ 4.000ರವರೆಗೆ ಇರುವ 2.300 ಕಿಮೀ ಉದ್ದದ ಕಾರಿಡಾರ್ ಅಲೈನ್‌ಮೆಂಟ್ ಭಾಗದ ಪರಿಶೀಲನೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಪ್ರಸ್ತಾವಿತ ನೆಲಮಟ್ಟದ (ಅಟ್ ಗ್ರೇಡ್) ವಿಭಾಗ ಹಾಗೂ ERS, ಕಿರು ಸೇತುವೆಗಳು, ರೈಲ್ವೆ ಕೆಳ ಸೇತುವೆಗಳ ಕಾಮಗಾರಿ ಪ್ರಗತಿಯನ್ನು ಪರಿಶೀಲಿಸಲಾಯಿತು. ಜೊತೆಗೆ ಅಲೈನ್‌ಮೆಂಟ್ ಸಾಧ್ಯತೆ, ನಿಲ್ದಾಣಗಳ ಸ್ಥಳಗಳು ಮತ್ತು ನಿರ್ಮಾಣ ವಿಧಾನಗಳ ಪರಿಶೀಲನೆ ಕೂಡ ನಡೆಸಲಾಯಿತು.
ಇದೇ ವೇಳೆ, ಬಾಕಿ ಉಳಿದ ಖಾಸಗಿ ಭೂಸ್ವಾಧೀನ ಹಸ್ತಾಂತರ, ಪರಿಹಾರ ಮತ್ತು ಪುನರ್ವಸತಿ, ಭಾರತೀಯ ರೈಲ್ವೇ ಅತಿಕ್ರಮಣಗಳ ತೆರವು, ಭಾರತೀಯ ರೈಲ್ವೇ ಆಸ್ತಿಗಳ ಸ್ಥಳಾಂತರ, BWSSB ಒಳಚರಂಡಿ ಮತ್ತು ನೀರಿನ ಪೈಪ್‌ಲೈನ್‌ಗಳ ಸ್ಥಳಾಂತರ, BESCOM ವಿದ್ಯುತ್ ಉಪಯುಕ್ತತೆಗಳ ತೆರವು ಮತ್ತು ಸ್ಥಳಾಂತರ ಹಾಗೂ ಭಾರತೀಯ ರೈಲ್ವೇ S&T ಕೇಬಲ್‌ಗಳ ಸ್ಥಳಾಂತರ ಸೇರಿದಂತೆ ಪ್ರಮುಖ ವಿಷಯಗಳ ಮೇಲೆ ಒತ್ತು ನೀಡಲಾಯಿತು. ಈ ಮೂಲಕ ಉದ್ದೇಶಿತ ಯೋಜನೆಯ ಕಾಮಗಾರಿಗಳಿಗೆ ಇರುವ ಅಡಚಣೆಗಳನ್ನು ನಿವಾರಿಸಿ ಯೋಜನೆಯ ಅನುಷ್ಠಾನವನ್ನು ವೇಗಗೊಳಿಸುವ ನಿಟ್ಟಿನಲ್ಲಿ ಹೆಜ್ಜೆ ಇಡಲಾಗಿದೆ.

## ಮಾನ್ಯ ಪ್ರಧಾನಮಂತ್ರಿ ಪ್ರಗತಿ ಸಭೆಯಲ್ಲಿ ಬಿಎಸ್‌ಆರ್‌ಪಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿದರು

2025 ಡಿಸೆಂಬರ್ 31ರಂದು ನಡೆದ 50ನೇ ಪ್ರಗತಿ (PRAGATI) ಸಭೆಯಲ್ಲಿ ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಬೆಂಗಳೂರು ಉಪನಗರ ರೈಲು ಯೋಜನೆಯ(BSRP) ಕಾಮಗಾರಿಗಳ ಸ್ಥಿತಿಗತಿಗಳನ್ನು ಪರಿಶೀಲಿಸಿದರು. ಈ ಸಭೆಯಲ್ಲಿ ಮಾನ್ಯ ಪ್ರಧಾನಮಂತ್ರಿಯವರು ರಸ್ತೆ, ರೈಲ್ವೆ, ವಿದ್ಯುತ್, ಜಲ ಸಂಪನ್ಮೂಲ ಹಾಗೂ ಕಲ್ಲಿದ್ದಲು ಕ್ಷೇತ್ರಗಳಿಗೆ ಸಂಬಂಧಿಸಿದ ಐದು ಮಹತ್ವದ ಯೋಜನೆಗಳನ್ನು ಅವಲೋಕಿಸಿದರು. ಈ ಯೋಜನೆಗಳು ಐದು ರಾಜ್ಯಗಳಲ್ಲಿ ಜಾರಿಗೊಳ್ಳುತ್ತಿದ್ದು, ಒಟ್ಟು ರೂ.40,000 ಕೋಟಿಗೂ ಅಧಿಕ ಹೂಡಿಕೆಯನ್ನು ಒಳಗೊಂಡಿವೆ.

ಸಭೆಯಲ್ಲಿ ಭಾರತ ಸರ್ಕಾರದ ಸಚಿವ ಸಂಪುಟ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಪ್ರಗತಿ ವೇದಿಕೆಯು ಎಲ್ಲಾ ಪಾಲುದಾರರನ್ನು ಒಟ್ಟುಗೂಡಿಸುವ ಮೂಲಕ ಸಂಘಟಿತ ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಸುಗಮಗೊಳಿಸಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಸಹಯೋಗದಿಂದ ಕೆಲಸ ಮಾಡಲು ಅನುವು ಮಾಡಿಕೊಡುತ್ತದೆ. ಇದು ಅಂತರ ಇಲಾಖೆಯ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಯೋಜನೆಯ ಅನುಷ್ಠಾನದ ವೇಗವನ್ನು ಹೆಚ್ಚಿಸಲು ಸಹಾಯ ಮಾಡಿದೆ.

### 4 ಬಿಎಸ್‌ಆರ್‌ಪಿ ಕಾರಿಡಾರ್‌ಗಳು 4 ಪ್ರಾದೇಶಿಕ ಹೂವುಗಳ ಹೆಸರನ್ನು ಇಡಲಾಗಿದೆ

ಕಾರಿಡಾರ್-1  ಸಂಪಿಗೆ

ಕಾರಿಡಾರ್-2  ಮಲ್ಲಿಗೆ

ಕಾರಿಡಾರ್-3  ಪಾರಿಜಾತ

ಕಾರಿಡಾರ್-4  ಕನಕ

ಸಂ-ಪ-ರ್ಕ



# ಬಿಎಸ್ ಆರ್ ಪಿ ಕಾಮಗಾರಿಗಳ ಪ್ರಗತಿ ವಿವರ

## ಬೆಂಗಳೂರು ಉಪನಗರ ರೈಲು ಯೋಜನೆ (BSRP) ಡಿಪೋ ಕಾಮಗಾರಿಗಳ ಸಂಕ್ಷಿಪ್ತ ವಿವರ

### ಸಾರಾಂಶ

ಸೋಲದೇವನಹಳ್ಳಿ ಮತ್ತು ಅಕ್ಕುಪೇಟೆ ಸ್ಥಳಗಳಲ್ಲಿ ಎರಡು ನಿರ್ವಹಣಾ ಡಿಪೋಗಳನ್ನು ಯೋಜಿಸಲಾಗಿದೆ. ಇದರಲ್ಲಿ ಸೋಲದೇವನಹಳ್ಳಿ ಡಿಪೋವನ್ನು 6 ಕಾರು ರೈಲು ನಿರ್ವಹಣೆಗೆ ಯೋಜಿಸಲಾಗಿದ್ದು, ಅಕ್ಕುಪೇಟೆ ಡಿಪೋವನ್ನು 9 ಕಾರು ರೈಲು ನಿರ್ವಹಣೆಗೆ ಯೋಜಿಸಲಾಗಿದೆ. ಈ ಡಿಪೋಗಳಲ್ಲಿ ನಿರ್ವಹಣೆ, ನಿಲುಗಡೆ, ಕಾರ್ಯಾಗಾರಗಳು, ಉಪಯುಕ್ತತೆಗಳು ಹಾಗೂ ಆಡಳಿತಕ್ಕೆ ಸಂಬಂಧಿಸಿದ ಸಮಗ್ರ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

### ಸೋಲದೇವನಹಳ್ಳಿ ಡಿಪೋ

ಈ ಡಿಪೋವು ಕಾರಿಡಾರ್-2 (ಮಲ್ಲಿಗೆ ಮಾರ್ಗ: ಬೆನ್ನಿಗಾನಹಳ್ಳಿ-ಚಿಕ್ಕಬಾಣಾವರ) ಹಾಗೂ ಕಾರಿಡಾರ್-4 (ಕನಕ ಮಾರ್ಗ: ಹೀಲಲಿಗೆ-ರಾಜನಕುಂಟೆ)ಗಳಿಗೆ ಸೇವೆ ಒದಗಿಸುತ್ತದೆ. ಡಿಪೋದ ಮಾಸ್ಟರ್ ಲೇಔಟ್‌ಗೆ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಡ್ರಾಯಿಂಗ್ ಮತ್ತು ಡಿಸೈನ್ ಅಂತಿಮಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. ಇದಕ್ಕೆ ಅಗತ್ಯವಿರುವ ಒಟ್ಟು 32.945 ಎಕರೆ ಭೂಮಿಯಲ್ಲಿ, 26.116 ಎಕರೆ ಭೂಮಿಯನ್ನು ಯಶಸ್ವಿಯಾಗಿ ಸ್ವಾಧೀನಪಡಿಸಿಕೊಂಡು ಕ ರೈಡ್ ಗೆ ಹಸ್ತಾಂತರಿಸಲಾಗಿದೆ. ಉಳಿದ 6.829 ಎಕರೆ ಭೂಮಿ ಸ್ವಾಧೀನ ಪ್ರಕ್ರಿಯೆಯಲ್ಲಿದೆ. ಇನ್ನು ಡಿಪೋ ಟೆಂಡರ್ ಅನ್ನು ಶೀಘ್ರದಲ್ಲೇ ಪ್ರಕಟಿಸಲಾಗುತ್ತದೆ.

### ಅಕ್ಕುಪೇಟೆ ಡಿಪೋ

ಈ ಡಿಪೋವು ಕಾರಿಡಾರ್-1 (ಸಂಪಿಗೆ ಮಾರ್ಗ: ಕೆಎಸ್ ಆರ್ ಬೆಂಗಳೂರು ನಗರ [SBC]-ದೇವನಹಳ್ಳಿ) ಹಾಗೂ ಕಾರಿಡಾರ್-3 (ಪಾರಿಜಾತ ಮಾರ್ಗ: ಕೆಂಗೇರಿ-ವೈಟ್ ಫೀಲ್ಡ್) ಗೆ ಸೇವೆ ಒದಗಿಸುತ್ತದೆ. ಈಗಾಗಲೇ ಡಿಪೋ ಮಾಸ್ಟರ್ ಲೇಔಟ್‌ಗೆ ಅನುಮೋದನೆ ನೀಡಲಾಗಿದೆ. ಪ್ರಸ್ತುತ ಟೆಂಡರ್‌ಗೆ ಸಂಬಂಧಿಸಿದ ಡ್ರಾಯಿಂಗ್ ಮತ್ತು ಡಿಸೈನ್ ಅಂತಿಮಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.

## ಸಾಮಾಜಿಕ ಮತ್ತು ಪರಿಸರ ಮೇಲ್ವಿಚಾರಣೆ ಹಾಗೂ ಕಾರ್ಯಪ್ರವೃತ್ತಿ

### ಪರಿಸರ / ಮರ ನಿರ್ವಹಣೆ

- 30,000 ಸಸಿಗಳ ಪರಿಹಾರ ಅರಣ್ಯೀಕರಣ ಹಾಗೂ 528 ಮರಗಳ ಜಿಯೋಟ್ಯಾಗಿಂಗ್ ಸಹಿತ ಸ್ಥಳಾಂತರ. ಇದಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (BDA)ದೊಂದಿಗೆ ಒಪ್ಪಂದ ಪತ್ರ (MoU) ಕಾರ್ಯಗತಗೊಳಿಸಲಾಗಿದೆ.
- ಕಾರಿಡಾರ್-2ರಲ್ಲಿ 112 ಮರಗಳು ಮತ್ತು ಕಾರಿಡಾರ್-4ರಲ್ಲಿ 28 ಮರಗಳನ್ನು ಯಶಸ್ವಿಯಾಗಿ ಸ್ಥಳಾಂತರಿಸಲಾಗಿದೆ.
- ಇಲ್ಲಿಯವರೆಗೆ ಒಟ್ಟು 87,000 ಪರಿಹಾರ ಅರಣ್ಯೀಕರಣ ಕಾರ್ಯವನ್ನು (57,000 - BBMP/ಈಗ GBA ಅಡಿಯಲ್ಲಿ ಹಾಗೂ 30,000 - BDA ಅಡಿಯಲ್ಲಿ)ಪೂರ್ಣಗೊಳಿಸಲಾಗಿದೆ.
- ಕಾರಿಡಾರ್-2 ಮತ್ತು 4ರಲ್ಲಿ ಖಾಸಗಿ ಮರಗಳ ಮೌಲ್ಯಮಾಪನವನ್ನು ಪೂರ್ಣಗೊಳಿಸಿ, ಪರಿಹಾರ ವಿತರಣೆಗಾಗಿ KIADB ಗೆ ಮಾಹಿತಿ ನೀಡಲಾಗಿದೆ.









# (ಮುಂದುವರಿದಿದೆ) ಬಿಎಸ್ ಆರ್ ಪಿ ಕಾಮಗಾರಿಗಳ ಪ್ರಗತಿ ವಿವರ

## ಸಾಮಾಜಿಕ ಮತ್ತು ಪರಿಸರ ಮೇಲ್ವಿಚಾರಣೆಯ ಕಾರ್ಯಪ್ರವೃತ್ತಿ





### ಸಾಮಾಜಿಕ

- ಪರಿಸರ, ಆರೋಗ್ಯ ಮತ್ತು ಸುರಕ್ಷತೆ (EHS) ಹಾಗೂ ಪುನರ್ವಸತಿ ಕಾರ್ಯಯೋಜನೆ (RAP) ಮಾರ್ಗಸೂಚಿಗಳ ಅಡಿಯಲ್ಲಿ 19 ಸಾಮರ್ಥ್ಯ ವೃದ್ಧಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.
- ಅಧಿಸೂಚಿತ ಸ್ಲಂ ನಿವಾಸಿಗಳ ಸ್ಥಳಾಂತರಕ್ಕಾಗಿ ಕರ್ನಾಟಕ ಸ್ಲಂ ಅಭಿವೃದ್ಧಿ ಮಂಡಳಿ (KSDB)ಯೊಂದಿಗೆ ಒಪ್ಪಂದ ಪತ್ರಕ್ಕೆ ಸಹಿ ಮಾಡಲಾಗಿದ್ದು, ಪರಿಹಾರ ಮತ್ತು ಪುನರ್ವಸತಿ (C&R) ನೀತಿಯಂತೆ 45 ಅತಿಕ್ರಮಣದಾರರು ಮತ್ತು 84 ಅಧಿಸೂಚಿತ ಸ್ಲಂ ನಿವಾಸಿಗಳಿಗೆ ಪರಿಹಾರ ಪಾವತಿ ಪೂರ್ಣಗೊಳಿಸಲಾಗಿದೆ.



- 101 ಅತಿಕ್ರಮಣದಾರರು ಮತ್ತು 94 ಸ್ಲಂ ನಿವಾಸಿಗಳಿಗೆ ರಾಷ್ಟ್ರೀಯಕೃತ ಬ್ಯಾಂಕ್‌ಗಳಲ್ಲಿ ಶೂನ್ಯ ಶುಲ್ಕ ಖಾತೆ ತೆರೆಯಲು ನೆರವು ನೀಡಲಾಗಿದ್ದು, ಪ್ರಧಾನಮಂತ್ರಿ ಜನಧನ ಯೋಜನೆಯಡಿ 4 ಲಕ್ಷ ರೂಪಾಯಿ ಜೀವ ವಿಮೆ ಹಾಗೂ 2 ಲಕ್ಷ ರೂಪಾಯಿ ಅಪಘಾತ ವಿಮೆ ಒಳಗೊಂಡ ಸಾಮಾಜಿಕ ಭದ್ರತಾ ಸೌಲಭ್ಯಗಳಲ್ಲಿ ನೋಂದಣಿ ಮಾಡಲಾಗಿದೆ.
- ಕಾರಿಡಾರ್-2ರಲ್ಲಿ 83 ಅಧಿಸೂಚಿತ ಸ್ಲಂ ನಿವಾಸಿಗಳು ಮತ್ತು 45 ಅತಿಕ್ರಮಣದಾರರಿಗೆ ಪರಿಹಾರ ಮತ್ತು ಪುನರ್ವಸತಿ (C&R) ಪಾವತಿಯನ್ನು ನಿಯಮಗಳ ಅನ್ವಯ ಪೂರ್ಣಗೊಳಿಸಲಾಗಿದೆ.
- ಕಾರಿಡಾರ್-2ರಲ್ಲಿ ಎಲ್ಲಾ ಅತಿಕ್ರಮಣದಾರರು ಮತ್ತು ಸ್ಲಂ ನಿವಾಸಿಗಳಿಂದ ಪರಿಹಾರ ಸ್ವೀಕಾರದೊಂದಿಗೆ ಸ್ಥಳ ಖಾಲಿ ಮಾಡುವ ಕುರಿತು ಒಪ್ಪಿಗೆ ಮತ್ತು ಅಫಿಡವಿಟ್ ಪತ್ರಗಳನ್ನು ಪಡೆಯಲಾಗಿದೆ.
- ಭೂಸ್ವಾಧೀನ, ಮರುಮೌಲ್ಯಮಾಪನ, ಆರೋಗ್ಯ ಮತ್ತು ಸುರಕ್ಷತೆ ಹಾಗೂ ಪರಿಸರ ಸಂಬಂಧಿತ 36 ಸಾರ್ವಜನಿಕ ದೂರುಗಳನ್ನು ಪರಿಹರಿಸಲಾಗಿದೆ.

### ಭೂಸ್ವಾಧೀನ, ಸಂರಚನಾ ಸ್ಥಿರತೆ ಅಧ್ಯಯನ ಮತ್ತು ಕಟ್ಟಡ ಮೌಲ್ಯಮಾಪನ

- ಕಟ್ಟಡ ಸ್ಥಿತಿ ಅಧ್ಯಯನ - ಕಾರಿಡಾರ್-2 ಮತ್ತು 4: ಅಂತಿಮ ಅಧಿಸೂಚನೆ ಹೊರಡಿಸಿರುವ ಎಲ್ಲಾ ಆಸ್ತಿಗಳಿಗೆ ಕಟ್ಟಡ ಸ್ಥಿತಿ ಅಧ್ಯಯನವನ್ನು ಬ್ಯೂರೋ ವೆರಿಟಾಸ್ ಮೂಲಕ ಪೂರ್ಣಗೊಳಿಸಲಾಗಿದೆ.
- ಕಟ್ಟಡ ಮೌಲ್ಯಮಾಪನ - ಕಾರಿಡಾರ್-2 ಮತ್ತು 4: ಅಂತಿಮ ಅಧಿಸೂಚನೆ ಹೊರಡಿಸಿರುವ ಆಸ್ತಿಗಳ ಪೈಕಿ ಕಾರಿಡಾರ್-2ರಲ್ಲಿ 98% ಮತ್ತು ಕಾರಿಡಾರ್-4ರಲ್ಲಿ 90% ಮೌಲ್ಯಮಾಪನ ಕಾರ್ಯವನ್ನು ಪ್ಯಾನೆಲ್ ಮೌಲ್ಯಮಾಪಕರ ಮೂಲಕ ಪೂರ್ಣಗೊಳಿಸಲಾಗಿದೆ.
- ಪರಿಹಾರ ಮತ್ತು ಪುನರ್ವಸತಿ ಪ್ಯಾಕೇಜ್ - ಕಾರಿಡಾರ್-2 ಮತ್ತು 4: ಕಾರಿಡಾರ್-2ರಲ್ಲಿ 85% C&R ಪಾವತಿ ಪೂರ್ಣಗೊಂಡಿದ್ದು, ಕಾರಿಡಾರ್-4ರಲ್ಲಿ ದಾಖಲೆ ಸಂಗ್ರಹ ಕಾರ್ಯ ಪ್ರಗತಿಯಲ್ಲಿದೆ.
- ಕಾರಿಡಾರ್-2ರ ಯೋಜನಾ ಪ್ರಭಾವಿತ ವ್ಯಕ್ತಿಗಳ (PAPs) ಚೈನೇಜ್ ಆಧಾರಿತ ಮಾಸ್ಟರ್ ಡೇಟಾ ಸೃಷ್ಟಿಸಲಾಗಿದೆ.

## ಪ್ರಮುಖ ಹುದ್ದೆಗಳ ಭರ್ತಿ


ಕ ರೈಡ್ ಸಂಸ್ಥೆಯು ಪ್ರಧಾನ ವ್ಯವಸ್ಥಾಪಕರು (ವಿದ್ಯುತ್) ಮತ್ತು ಪ್ರಧಾನ ವ್ಯವಸ್ಥಾಪಕರು (ಹಣಕಾಸು) ಹುದ್ದೆಗಳಿಗಾಗಿ ಸಂದರ್ಶನಗಳನ್ನು ಯಶಸ್ವಿಯಾಗಿ ನಡೆಸಿದೆ. ಇನ್ನು ಆಯ್ಕೆ ಸಮಿತಿಯು ಪ್ರಧಾನ ವ್ಯವಸ್ಥಾಪಕರು (ವಿದ್ಯುತ್) ಮತ್ತು ಪ್ರಧಾನ ವ್ಯವಸ್ಥಾಪಕರು (ಹಣಕಾಸು) ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ. ಈಗಾಗಲೇ ನೇಮಕಾತಿ ಆದೇಶಗಳನ್ನು ಜಾರಿ ಮಾಡಲಾಗಿದ್ದು, ಇಬ್ಬರೂ ಅಧಿಕಾರಿಗಳು ಶೀಘ್ರದಲ್ಲೇ ಕರ್ತವ್ಯ ಸ್ವೀಕರಿಸುವ ನಿರೀಕ್ಷೆಯಿದೆ. ಈ ಹಿರಿಯ ವೃತ್ತಿಪರರ ಸೇರ್ಪಡೆಯಿಂದ ಕ ರೈಡ್ ಸಂಸ್ಥೆಯ ನಾಯಕತ್ವ ಮತ್ತು ಸಂಸ್ಥಾತ್ಮಕ ಸಾಮರ್ಥ್ಯವು ಗಮನಾರ್ಹವಾಗಿ ಬಲಗೊಳ್ಳಲಿದೆ.

# ದ್ವಿಪಥೀಕರಣ ಯೋಜನೆ
## ಕಾಮಗಾರಿ ಪ್ರಗತಿ ವಿವರ



## ಯಶವಂತಪುರ ಚನ್ನಸಂದ್ರ(21.7 ಕಿ.ಮೀ)
ಭೌತಿಕ ಪ್ರಗತಿ : 55%


K-RIDE DOUBLING PROJECT FOCUS




| | |
|---|---|
| ಮಂಜೂರಾದ ವರ್ಷ | ನವೆಂಬರ್ 2018 (ಜೂನ್ 2020 ರಲ್ಲಿ ಕೆ ರೈಡ್‌ಗೆ ವರ್ಗಾಯಿಸಲಾಗಿದೆ) |
| ಮಂಜೂರಾದ ವೆಚ್ಚ | Rs. 314.10 Cr. |
| 2025- 26 ರವರೆಗಿನ ಸಂಚಿತ ವೆಚ್ಚ | Rs. 161.85 Cr. |

| Sl. No. | Item | Unit | Total Scope | Physical Progress |
|---|---|---|---|---|
| 1 | Earthwork | Cum | 19100 | 86.02% |
| 2 | Blanketing | Cum | 62500 | 27.00% |
| 3 | Retaining wall | Rmt. | 6150 | 77.00% |
| 4 | Minor Bridge | No. | 37 | 70.27% |
| 5 | Major Bridge | No. | 2 | 38.00% |
| 6 | RUBs | No. | 1 | 0.00% |
| 7 | Station Building | No. | 2 | 50.00% |
| 8 | Platform | No. | 1 | 50.00% |
| 9 | S&T works | No. | 6 | 30.00% |
| 10 | TRD Works | Km. | 21.9 | 20.00% |
| 11 | Track Linking | Km. | 21.9 | 0.00% |
| 12 | Commissioning | Km. | 21.9 | 0.00% |

## ಬೈಯ್ಯಪ್ಪನಹಳ್ಳಿ – ಹೊಸೂರು(48 ಕಿ.ಮಿ)
ಭೌತಿಕ ಪ್ರಗತಿ : 86%




| | |
|---|---|
| ಮಂಜೂರಾದ ವರ್ಷ | ನವೆಂಬರ್ 2018 (ಜೂನ್ 2020 ರಲ್ಲಿ ಕೆ ರೈಡ್‌ಗೆ ವರ್ಗಾಯಿಸಲಾಗಿದೆ) |
| ಮಂಜೂರಾದ ವೆಚ್ಚ | Rs. 498.73 Cr. |
| 2025- 26 ರವರೆಗಿನ ಸಂಚಿತ ವೆಚ್ಚ | Rs.656.63 Cr. |



| Sl. No. | Item | Unit | Total Scope | Physical Progress |
|---|---|---|---|---|
| 1 | Earthwork | Cum | 1152000 | 98% |
| 2 | Blanketing | Cum | 155500 | 80% |
| 3 | Minor Bridge | No. | 101 | 96% |
| 4 | RUBs | No. | 15 | 93% |
| 5 | Major Bridge | No. | 7 | 75% |
| 6 | ROB | No. | 1 | 80% |
| 7 | Station Building | No. | 4 | 98% |
| 8 | Ballast Supply | Cum | 140500 | 60% |
| 9 | Track Linking | Km. | 48 | 45% |
| 10 | S&T works | No. | 6 | 50% |
| 11 | OHE Works | Km. | 48 | 50% |
| 12 | Commissioning | Km. | 48 | 30% |

## 1 ದ್ವಿಪಥೀಕರಣ ಯೋಜನೆಯ ಪ್ರಗತಿಯ ಮಾಹಿತಿ ಯಶವಂತಪುರದಿಂದ ಚನ್ನಸಂದ್ರದವರೆಗೆ (21.70 ಕಿ.ಮೀ)





ಯಶವಂತಪುರ ಬೈಪಾಸ್‌ನಲ್ಲಿ ರೈಲು ಮಾರ್ಗದ ನಿರ್ಮಾಣಕ್ಕಾಗಿ ಭೂಕಾರ್ಯ ಕಾಮಗಾರಿ ಪ್ರಗತಿಯಲ್ಲಿದೆ.



ಯಶವಂತಪುರದಲ್ಲಿ ಎಸ್ & ಟಿ ವೆಸ್ಟ್ ಗೂಮ್ಟಿ ಕಟ್ಟಡದ ಕಾಮಗಾರಿ ಪೂರ್ಣಗೊಂಡಿದ್ದು, ಟ್ರ್ಯಾಕ್ ಲಿಂಕಿಂಗ್‌ಗೆ ಅಗತ್ಯವಾದ ಫಾರ್ಮೇಷನ್ ಸಿದ್ಧಗೊಂಡಿದೆ.



ಕಿರು ಸೇತುವೆ / ಜಲಮಾರ್ಗ ಒಳಚರಂಡಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.



ಡಾಲರ್ಸ್ ಕಾಲೋನಿ ಬಳಿ, ಭದ್ರಪ್ಪ ಲೇಔಟ್, 580A ರಸ್ತೆ ಕೆಳ ಸೇತುವೆಗಾಗಿ ಪ್ರಿಕಾಸ್ಟ್ ಬಾಕ್ಸ್ ವಿಭಾಗವು ಲಾಂಚಿಂಗ್‌ಗೆ ಸಿದ್ಧವಾಗಿದೆ.



ಬಾಣಸವಾಡಿ ಯಾರ್ಡ್‌ನಲ್ಲಿ ರೈಲು ಮಾರ್ಗದ ಫಾರ್ಮೇಷನ್‌ಗಾಗಿ ಮಣ್ಣು ಕತ್ತರಿಸುವ ಕಾಮಗಾರಿ ಪ್ರಗತಿಯಲ್ಲಿದೆ.

## 2 ದ್ವಿಪಥೀಕರಣ ಯೋಜನೆಯ ಪ್ರಗತಿಯ ಮಾಹಿತಿ ಬೈಯಪನಹಳ್ಳಿಯಿಂದ ಹೊಸೂರು ವರೆಗೆ (48.00 ಕಿ.ಮೀ)





25-11-2025 ರಂದು ರೈಲು ಸುರಕ್ಷತಾ ಆಯುಕ್ತರು(CRS) ಪರಿಶೀಲನೆ ನಡೆಸಿದ ನಂತರ ಬೆಳ್ಳಂದೂರು-ಕಾರ್ಮೆಲರಾಮ್ ವಿಭಾಗದ ಟ್ರ್ಯಾಕ್ ಕಾಮಗಾರಿಯನ್ನು ಅಧಿಕೃತವಾಗಿ ಕಾರ್ಯಾರಂಭ (ಕಮಿಷನ್) ಮಾಡಲಾಗಿದೆ.



ಹೀಲಲಿಗೆ-ಕಾರ್ಮೆಲರಾಮ್ ವಿಭಾಗವನ್ನು 2023ರಲ್ಲಿಯೇ ಅಧಿಕೃತವಾಗಿ ಕಾರ್ಯಾರಂಭ (ಕಮಿಷನ್) ಮಾಡಲಾಗಿದೆ



ಬೈಯಪ್ಪನಹಳ್ಳಿ ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಪ್ರಮುಖ ಸೇತುವೆ ಸಂಖ್ಯೆ 531 ಅನ್ನು ದ್ವಿಪಥಕ್ಕೆ ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ.



ಆನೇಕಲ್‌ನಲ್ಲಿ ಟ್ರ್ಯಾಕ್ ಲಿಂಕಿಂಗ್‌ಗೆ ಅಗತ್ಯವಾದ ಫಾರ್ಮೇಷನ್ ಸಿದ್ಧಗೊಂಡಿದೆ.



ಆನೇಕಲ್ ರಸ್ತೆಯಲ್ಲಿ ರೈಲ್ವೆ ನಿರ್ಮಾಣಕ್ಕಾಗಿ ಭೂ ಕಾಮಗಾರಿ ಪ್ರಗತಿಯಲ್ಲಿದೆ.



ಹುಸ್ಕೂರ್ ಯಾರ್ಡ್ ಸ್ಟೇಷನ್ ಕಟ್ಟಡ ಪೂರ್ಣಗೊಂಡಿದ್ದು, 25-11-2025 ರಂದು CRS ಪರಿಶೀಲನೆಯ ನಂತರ ಕಾರ್ಯಾರಂಭ ಮಾಡಿದೆ



# ಬಿ ಎಸ್ ಆರ್ ಪಿ ಟೆಂಡರ್‌ಗಳು ಮತ್ತು ನಿರ್ಮಾಣ ಕಾಮಗಾರಿಗಳ ಪ್ರಗತಿ ವಿವರಗಳು

## ಕ-ರೈಡ್ ನಿರ್ದೇಶಕರ ಮಂಡಳಿ ಸಭೆ

- ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ|| ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕ ರೈಡ್ ನಿರ್ದೇಶಕರ ಮಂಡಳಿ ಸಭೆಯಲ್ಲಿ ಕಾರಿಡಾರ್-2 ಮತ್ತು ಕಾರಿಡಾರ್-4 ಅಡಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಅನುಮೋದಿತ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ ಹಾಗೂ ಜಾರಿಯ ಕಾರ್ಯಗಳು ಪ್ರಸ್ತುತ ಸಕ್ರಿಯ ಪ್ರಗತಿಯಲ್ಲಿವೆ.
- ಕ-ರೈಡ್ ಸಂಸ್ಥೆಯು ಎಲ್ಲಾ ಕಾನೂನುಬದ್ಧ, ಹಣಕಾಸು ಹಾಗೂ ಲೆಕ್ಕಪತ್ರ ಸಂಬಂಧಿತ ಅನುಸರಣೆಗಳನ್ನು ಸಂಪೂರ್ಣವಾಗಿ ಪಾಲಿಸಿದ್ದು, ಈ ಸಂಬಂಧಿತ ಅನುಸರಣೆಗಳನ್ನು ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (CAG) (ಕಂಟ್ರೋಲರ್ ಮತ್ತು ಆಡಿಟರ್ ಜನರಲ್) ಪರಿಶೀಲಿಸಿ ಅನುಮೋದಿಸಿದ್ದಾರೆ.
- ನಿರ್ದೇಶಕರ ಮಂಡಳಿಯಲ್ಲಿರುವ ಎರಡೂ ಸರ್ಕಾರಗಳ ಪ್ರತಿನಿಧಿಗಳು, BSTP ಯೋಜನೆಗಳ ತ್ವರಿತ ಅನುಷ್ಠಾನಕ್ಕಾಗಿ ಅಗತ್ಯ ಹಣಕಾಸು ಸಹಾಯ ಒದಗಿಸುವುದಾಗಿ ಭರವಸೆ ನೀಡಿದ್ದಾರೆ.
- ಇನ್ನು ಕ ರೈಡ್ ಸಂಸ್ಥೆಯ 24ನೇ ವಾರ್ಷಿಕ ಮಹಾಸಭೆ (AGM) ಹಾಗೂ ಬಿ ರೈಡ್ ಸಂಸ್ಥೆಯ 4ನೇ ವಾರ್ಷಿಕ ಮಹಾಸಭೆ ದಿನಾಂಕ 20.12.2025 ರಂದು ಯಶಸ್ವಿಯಾಗಿ ನಡೆಸಲಾಯಿತು. ಸಭೆಗಳ ಸಂದರ್ಭದಲ್ಲಿ AGM ನೋಟಿಸ್, ನಿರ್ದೇಶಕರ ವರದಿ, ಕಾನೂನುಬದ್ಧ ಲೆಕ್ಕಪರಿಶೋಧನಾ ವರದಿ, ಕಾರ್ಯದರ್ಶಿ ಲೆಕ್ಕಪರಿಶೋಧನಾ ವರದಿ ಹಾಗೂ ಹಣಕಾಸು ವಿವರಗಳನ್ನು ಸದಸ್ಯರ ಮುಂದೆ ಮಂಡಿಸಿ ಅಧಿಕೃತವಾಗಿ ಅಂಗೀಕರಿಸಲಾಯಿತು.

## ನಿರ್ಮಾಣ ಕಾಮಗಾರಿಗಳ ಪ್ರಗತಿ: ಪ್ಯಾಕೇಜುಗಳು: C2A ಮತ್ತು C2B

| | ಚೆನ್ನಿಗಾನಹಳ್ಳಿ (Elevated Interchange for C2 & C4) | | | ಕಸ್ತೂರಿ ನಗರ (At-grade) | | | |
|---|---|---|---|---|---|---|---|
| ವಿವರಣೆ | Preliminary works | Foundation works | Substructure Pier/Portal Pier | Preliminary works | Raft PCC | Raft RCC | Sub-structure |
| ವ್ಯಾಪ್ತಿ | 205 | 205 | 24 | 205 | 205 | 205 | 26 |
| ಪೂರ್ಣಗೊಂಡಿದೆ | 205 | 185 | 23 | 205 | 205 | 205 | 5 |
| ಪೂರ್ಣಗೊಂಡ ಶೇಕಡಾವಾರು | 100% | 90% | 96% | 100% | 100% | 100% | 19% |

| | ಬಾಣಸವಾಡಿ (At-grade) | | | ಹೆಬ್ಬಾಳ (At-grade) | |
|---|---|---|---|---|---|
| ವಿವರಣೆ | Preliminary works | Retaining wall | Raft PCC | Preliminary works | Retaining Wall PCC |
| ವ್ಯಾಪ್ತಿ | 205 | 205 | 205 | 205 | 205 |
| ಪೂರ್ಣಗೊಂಡಿದೆ | 100 | 100 | 0 | 60 | 60 |
| ಪೂರ್ಣಗೊಂಡ ಶೇಕಡಾವಾರು | 49% | 49% | 0 | 29% | 29% |

| ಯಶವಂತಪುರ (Elevated interchange for C2 & C1) | | | | | ಚಿಕ್ಕಬಾಣಾವರ (Elevated) | | |
|---|---|---|---|---|---|---|---|
| ವಿವರಣೆ | Preliminary works | D-wall. | Barret column | Ground floor slab PCC | Preliminary works | Foundation work | Pre-cast I girders |
| ವ್ಯಾಪ್ತಿ | 205 | 505 | 55 | 20500% | 205 | 205 | 122 |
| ಪೂರ್ಣಗೊಂಡಿದೆ | 205 | 378 | 24 | 2500% | 205 | | 9 |
| ಪೂರ್ಣಗೊಂಡ ಶೇಕಡಾವಾರು | 100% | 75% | 44% | 12% | 100% | in progress | 7% |

# (ಮುಂದುವರಿದಿದೆ)
# ಬಿ ಎಸ್ ಆರ್ ಪಿ ಟೆಂಡರ್‌ಗಳು ಮತ್ತು ನಿಲ್ದಾಣ ಕಾಮಗಾರಿಗಳ ಪ್ರಗತಿ ವಿವರಗಳು

## ನಿಲ್ದಾಣ ಕಾಮಗಾರಿಗಳ ಪ್ರಗತಿ: ಪ್ಯಾಕೇಜುಗಳು: C2A ಮತ್ತು C2B

| | ಮೈದರಹಳ್ಳಿ (At-grade) | | | | ಶೆಟ್ಟಿಹಳ್ಳಿ (At-grade) | | |
|---|---|---|---|---|---|---|---|
| ವಿವರಣೆ | Preliminary works | Retaining Wall | Station box PCC | Station box RCC | Preliminary works | Retaining Wall | Station box Raft |
| ವ್ಯಾಪ್ತಿ | 205 | 205 | 205 | | 205 | 205 | 205 |
| ಪೂರ್ಣಗೊಂಡಿದೆ | 205 | 120 | 30 | | 205 | 0 | 31 |
| ಪೂರ್ಣಗೊಂಡ ಶೇಕಡಾವಾರು | 100% | 59% | 15% | In progress | 100% | 0 | 15% |

## ಪ್ಯಾಕೇಜುಗಳು: C4A ಮತ್ತು C4B

**C4A** ನಿಲ್ದಾಣಗಳು:
- ಹುಸ್ಕೂರು ನಿಲ್ದಾಣ: ರಾಫ್ಟ್ ಕೆಲಸ ಪ್ರಗತಿಯಲ್ಲಿದೆ.
- ಬೆಳಂದೂರು ನಿಲ್ದಾಣ: ವಾಟರ್‌ಪ್ರೂಫಿಂಗ್ ರಾಫ್ಟ್ ಕೆಲಸ ಪ್ರಗತಿಯಲ್ಲಿದೆ.

**C4B** ನಿಲ್ದಾಣಗಳು:
- ರಾಜನಕುಂಟೆ, ಜಕ್ಕೂರು ಚನ್ನಸಂದ್ರ, ಹೊರಮಾವು, ಆರ್.ಕೆ. ಹೆಗ್ಡೆ ನಗರ ಹಾಗೂ ತನಿಸಂದ್ರ ನಿಲ್ದಾಣಗಳಲ್ಲಿ ಪ್ರಾಥಮಿಕ ಕೆಲಸಗಳು ಪ್ರಗತಿಯಲ್ಲಿವೆ.
- ಜಕ್ಕೂರು ನಿಲ್ದಾಣದಲ್ಲಿ ತೋಡಿಕೆ (ಎಕ್ಸ್‌ಕವೇಷನ್) ಕೆಲಸ ಪ್ರಗತಿಯಲ್ಲಿದೆ.
- ರಾಜನಕುಂಟೆ ನಿಲ್ದಾಣದಲ್ಲಿ ರಿಟೈನಿಂಗ್ ವಾಲ್ ಕೆಲಸ ಪ್ರಗತಿಯಲ್ಲಿದೆ.


ಯಶವಂತಪುರ


ಶೆಟ್ಟಿಹಳ್ಳಿ


ಮೈದರಹಳ್ಳಿ


ಚಿಕ್ಕಬಾಣಾವರ

## ಕಾರಿಡಾರ್ 1:

- ಕಾರಿಡಾರ್ C1 (ಸಂಪಿಗೆ ಲೈನ್: ಮೆಜೆಸ್ಟಿಕ್‌ನಿಂದ ದೇವನಹಳ್ಳಿ ತನಕ, ವಿಮಾನ ನಿಲ್ದಾಣ ಲಿಂಕ್ ಲೈನ್ ಸೇರಿದಂತೆ) ರ ಅಲೈನ್‌ಮೆಂಟ್‌ಗೆ ರೈಲ್ವೆಯಿಂದ ಅನುಮೋದನೆ ದೊರೆತಿದೆ.
- ಅನುಮೋದಿತ ಅಲೈನ್‌ಮೆಂಟ್‌ಗೆ ಅನುಗುಣವಾಗಿ ನಿರ್ಮಾಣ ಕಾರ್ಯಗಳ ಸ್ಥಳೀಯ ಸಾಧ್ಯತೆಯನ್ನು ಎರಡು ವಿಭಾಗಗಳಲ್ಲಿ ಪರಿಶೀಲಿಸಲಾಗುತ್ತಿದೆ: ಮೆಜೆಸ್ಟಿಕ್‌ನಿಂದ ಯಲಹಂಕ ಹಾಗೂ ಯಲಹಂಕದಿಂದ ದೇವನಹಳ್ಳಿ.
- ವಿಮಾನ ನಿಲ್ದಾಣ ಲಿಂಕ್ ಲೈನ್ ಕುರಿತು, ಟ್ರಂಪೆಟ್ ಇಂಟರ್‌ಚೇಂಜ್ ಮುಂದೆ ಆರಂಭವಾಗಿ ಬಿ.ಕೆ. ಹಳ್ಳಿ ಮೂಲಕ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಅಲೈನ್‌ಮೆಂಟ್ ಅನ್ನು BIAL ಅಧಿಕಾರಿಗಳೊಂದಿಗೆ ಸಮನ್ವಯಗೊಳಿಸಲಾಗುತ್ತಿದೆ. ವಿಮಾನ ನಿಲ್ದಾಣ ಆವರಣದೊಳಗಿನ ನಿಲ್ದಾಣ ಪ್ರದೇಶಗಳ ವಿವರವಾದ ಯೋಜನೆ ಮತ್ತು ಭೂಮಿ ಅಗತ್ಯತೆಗಳನ್ನು ಶೀಘ್ರದಲ್ಲೇ ಅಂತಿಮಗೊಳಿಸಲಾಗುವುದು.
- ಕಾರಿಡಾರ್ 1ರ ಭಾಗವಾಗಿರುವ ಪಾರ್ಟ್ ವೈಯಾಡಕ್ಟ್ ಎಲಿವೇಟೆಡ್ ಕೆಲಸಗಳು (ಯಶವಂತಪುರ BSRP ನಿಲ್ದಾಣದಿಂದ ಭಾರತೀಯ ರೈಲ್ವೆ ಯಾರ್ಡ್‌ವರೆಗೆ) ಪ್ಯಾಕೇಜ್ 1ರಲ್ಲಿ C2 ಕಾರಿಡಾರ್ / ಮಲ್ಲಿಗೆ ಲೈನ್ ಜೊತೆ ನಡೆಸಲಾಗುತ್ತದೆ. ಇದಕ್ಕಾಗಿ C2 ಕಾರಿಡಾರ್ ಸಂಪೂರ್ಣದ ಟೆಂಡರ್ ಅನ್ನು 3 ಪ್ಯಾಕೇಜ್‌ಗಳಲ್ಲಿ ಆಹ್ವಾನಿಸಲಾಗಿದೆ.
- ಯಶವಂತಪುರ ನಿಲ್ದಾಣವು C1 ಮತ್ತು C2 ಕಾರಿಡಾರ್‌ಗಳ ಇಂಟರ್‌ಚೇಂಜ್ ನಿಲ್ದಾಣವಾಗಿದ್ದು, ಒಂದೇ ಕಟ್ಟಡದಲ್ಲಿ ವಿಭಿನ್ನ ಮಟ್ಟಗಳಲ್ಲಿ ನಿರ್ಮಾಣವಾಗಲಿದ್ದು, ನಿರ್ಮಾಣ ಕಾರ್ಯಗಳು ತ್ವರಿತಗತಿಯಲ್ಲಿ ಪ್ರಾರಂಭಗೊಂಡಿವೆ.
- ಯಶವಂತಪುರ BSRP ನಿಲ್ದಾಣವನ್ನು ಭಾರತೀಯ ರೈಲ್ವೆ ನಿಲ್ದಾಣದೊಂದಿಗೆ ಸಂಪರ್ಕಿಸುವ C1 ಕಾರಿಡಾರ್‌ನ ವೈಯಾಡಕ್ಟ್ ಭಾಗಿಕ ಕೆಲಸಗಳ ಅಡಿಪಾಯ ಕಾರ್ಯಗಳು ಪ್ರಗತಿಯಲ್ಲಿವೆ.
- ಯಲಹಂಕ ಸಮೀಪದ C1 ಕಾರಿಡಾರ್‌ಗೆ ಸಂಬಂಧಿಸಿದ ಕೆಲಸಗಳನ್ನು (C1 ಮತ್ತು C4ರ ಇಂಟರ್‌ಚೇಂಜ್ ನಿಲ್ದಾಣ) C4 ಕಾರಿಡಾರ್‌ನ ಕೆಲಸಗಳೊಂದಿಗೆ ಕೈಗೊಳ್ಳಲಾಗುತ್ತದೆ.

## ಕಾರಿಡಾರ್ 3:

- ಕಾರಿಡಾರ್-3ರ ಕೆಲಸಗಳ ವ್ಯಾಪ್ತಿಗೆ ಸಂಬಂಧಿಸಿದ ಸ್ಥಳ ಪರಿಶೀಲನೆಯ ಸಾಧ್ಯತಾ ಅಧ್ಯಯನ ಪೂರ್ಣಗೊಂಡಿದ್ದು, ಅಲೈನ್‌ಮೆಂಟ್ ಅಂತಿಮಗೊಳಿಸಲಾಗಿದೆ.

# ನವೆಂಬರ್ 2025 ರಲ್ಲಿ ಹುಸ್ಕೂರು ಹೊಸ ನಿಲ್ದಾಣ ಯಾರ್ಡ್ ಸೇರಿದಂತೆ ಬೆಳಂದೂರು – ಕಾರ್ಮೆಲರಾಮ್ ಹಳಿ ದ್ವಿಪಥೀಕರಣ (3.522 Km)

ಬೈಯ್ಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆಯ ಭಾಗವಾದ ಬೆಳಂದೂರು ರಸ್ತೆ (BLRR) – ಕಾರ್ಮೆಲರಾಮ್ (CRLM) ಬ್ಲಾಕ್ ಸೆಕ್ಷನ್ (3.522 Km) ಹಾಗೂ ಹುಸ್ಕೂರು ಹೊಸ ನಿಲ್ದಾಣ ಯಾರ್ಡ್ ಅನ್ನು 25, ನವೆಂಬರ್ 2025ರಂದು ಕಾರ್ಯಾರಂಭ ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ಬೆಳಂದೂರು ರಸ್ತೆ – ಕಾರ್ಮೆಲರಾಮ್ ನಡುವೆ ಹೊಸ ರೈಲು ಹಳಿ ದ್ವಿಪಥೀಕರಣ ಮಾರ್ಗವನ್ನು ನಿರ್ಮಿಸಲಾಗಿದೆ. ಬೆಳಂದೂರು ರಸ್ತೆ ಹಾಗೂ ಹುಸ್ಕೂರು ಎರಡು ಕ್ರಾಸಿಂಗ್ ನಿಲ್ದಾಣಗಳನ್ನು ಒಳಗೊಂಡಿದ್ದು, (ಈ ಬ್ಲಾಕ್ ಸೆಕ್ಷನ್ ಚಾಲನೆಗೆ ಬಂದಿರುವುದರಿಂದ,) ಇದರಲ್ಲಿ ಹೀಲಲಿಗೆ ಯಿಂದ ಬೆಳಂದೂರು ರಸ್ತೆ ತನಕ (14 Km) ರೈಲು ಸಂಚಾರಕ್ಕಾಗಿ ದ್ವಿಪಥೀಕರಣ ಮಾರ್ಗ ಕಾರ್ಯಾರಂಭವಾಗಿದೆ. (ಕಾರ್ಯಾಚರಣೆ ನಡೆಸುತ್ತಿದೆ)

ಬೆಳಂದೂರು ರಸ್ತೆ ನಿಲ್ದಾಣವನ್ನು (BLRR) ಅರ್ಧ ನಿಲ್ದಾಣದಿಂದ 5 ಲೈನ್ ನಿಲ್ದಾಣವಾಗಿ ದ್ವಿಪಥೀಕರಣ ಮಾರ್ಗ ಸಹಿತ ಮೇಲ್ದರ್ಜೆಗೇರಿಸಲಾಗಿದೆ. ಇಲ್ಲಿ ಪ್ರತಿ 600 ಮೀ ಉದ್ದದ 02 ಹೈ ಲೆವೆಲ್ ಪ್ಲಾಟ್‌ಫಾರ್ಮ್‌ಗಳು ಮತ್ತು ಪ್ಲಾಟ್‌ಫಾರ್ಮ್ (PF) 1 ಮತ್ತು 2ರ ನಡುವೆ ಪ್ರಯಾಣಿಕರ ಸುಗಮ ಸಂಚಾರಕ್ಕಾಗಿ 7.5m × 3.0m ಗಾತ್ರದ ಸಬ್‌ವೇ ನಿರ್ಮಿಸಲಾಗಿದೆ. ಅಲ್ಲದೆ, ಪ್ರತಿ ಪ್ಲಾಟ್‌ಫಾರ್ಮ್ ಮೇಲೆ 48 m × 8 m ಗಾತ್ರದ ಆರು ಪ್ಲಾಟ್‌ಫಾರ್ಮ್ ಶೆಲ್ಟರ್‌ಗಳು ಹಾಗೂ 672 Sq.m ವಿಸ್ತೀರ್ಣದ (G+1) ಹೊಸ ನಿಲ್ದಾಣ ಕಟ್ಟಡವನ್ನು ಲಿಫ್ಟ್ ಸೌಲಭ್ಯಗಳೊಂದಿಗೆ ನಿರ್ಮಿಸಲಾಗಿದೆ. ಹೆಚ್ಚುವರಿ ಪ್ರಯಾಣಿಕ ಸೌಲಭ್ಯಗಳಲ್ಲಿ ರಸ್ತೆ ಕೆಳ ಸೇತುವೆ (RUB) 511 (ವರ್ತೂರು ರಸ್ತೆ) ಯಿಂದ ಹೊಸ ಬೆಳಂದೂರು ರಸ್ತೆ ನಿಲ್ದಾಣ ಕಟ್ಟಡಕ್ಕೆ ಸಂಪರ್ಕಿಸುವ ಕಾಂಕ್ರೀಟ್ ರಸ್ತೆ, ಉಕ್ಕು ಮತ್ತು ಕುಳಿತುಕೊಳ್ಳುವ ಗ್ರಾನೈಟ್ ಬೆಂಚುಗಳು, ಕುಡಿಯುವ ನೀರಿನ ವ್ಯವಸ್ಥೆ, ಪ್ರಯಾಣಿಕ ಘೋಷಣಾ ವ್ಯವಸ್ಥೆ ಇತ್ಯಾದಿಗಳು ಸೇರಿವೆ.

ಬೈಯಪ್ಪನಹಳಿ (BYPL) ಜಂಕ್ಷನ್ ಬಳಿ ಇರುವ ಈ ಹೊಸ ದ್ವಿಪಥೀಕರಣ ಮಾರ್ಗ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ (SMVB), ಬೆಂಗಳೂರು ನಗರ ರೈಲು ನಿಲ್ದಾಣ (SBC), ಕೃಷ್ಣರಾಜಪುರಂ (KJM), ಧರ್ಮಾವರಂ (DMM), ಮತ್ತು ಬಾಣಸವಾಡಿ (BAND) ಅನ್ನು ಸಂಪರ್ಕಿಸುವ ಪ್ರಮುಖ ಮಾರ್ಗಗಳ ಕಡೆಗೆ ಸುಗಮ ರೈಲು ಸಂಚಾರಕ್ಕೆ ಅನುವು ಮಾಡಿಕೊಡುತ್ತದೆ, ಇದು ಕಾರ್ಯಾಚರಣೆಯ ದಕ್ಷತೆಯನ್ನು ಸುಧಾರಿಸುತ್ತದೆ ಮತ್ತು ದಟ್ಟಣೆಯನ್ನು ಕಡಿಮೆ ಮಾಡುತ್ತದೆ. ಈ ನವೀಕರಣವು ಪ್ರಯಾಣಿಕರ ಸುರಕ್ಷತೆಯನ್ನು ಹೆಚ್ಚಿಸುತ್ತದೆ, ಕಾಯುವ ಸಮಯವನ್ನು ಕಡಿಮೆ ಮಾಡುತ್ತದೆ ಮತ್ತು ನಗರದಲ್ಲಿ ಬೆಳೆಯುತ್ತಿರುವ ಐಟಿ ಮತ್ತು ವ್ಯಾಪಾರ ಕಾರಿಡಾರ್ ಸಮಯಪಾಲನೆಯನ್ನು ಹೆಚ್ಚಿಸುತ್ತದೆ.

CRS ತಪಾಸಣೆಯ ಸಮಯದಲ್ಲಿ, ಹೊಸ ದ್ವಿಗುಣಗೊಳಿಸುವ ಮಾರ್ಗದ ವೇಗ ಪ್ರಯೋಗವು ಗರಿಷ್ಠ 110 ಕಿಮೀ / ಗಂ ವೇಗವನ್ನು ಸಾಧಿಸಿದ್ದು, ವಿಭಾಗವು ಎಲ್ಲಾ ನಿಗದಿತ ಸುರಕ್ಷತಾ ಮಾನದಂಡಗಳನ್ನು ಪೂರೈಸುವ ಮೂಲಕ ರೈಲ್ವೆ ಸುರಕ್ಷತಾ ಆಯುಕ್ತರಿಂದ (CRS) ಪ್ರಶಂಸೆಯನ್ನು ಪಡೆದಿದೆ.











## (ಮುಂದುವರಿದಿದೆ)
## ನವೆಂಬರ್ 2025 ರಲ್ಲಿ ಹುಸ್ಕೂರು ಹೊಸ ನಿಲ್ದಾಣ ಯಾರ್ಡ್ ಸೇರಿದಂತೆ ಬೆಳಂದೂರು – ಕಾರ್ಮೆಲರಾಮ್ ಹಳಿ ದ್ವಿಪಥೀಕರಣ (3.522 Km) ಕಾರ್ಯಾರಂಭ















# ನಿಮ್ಮ ಬಿಎಸ್‌ಆರ್‌ಪಿ ಬಗ್ಗೆ ತಿಳಿಯಿರಿ

## ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ಸ್ / ಪ್ಲಾಟ್‌ಫಾರ್ಮ್ ಸ್ಕ್ರೀನ್ ಗೇಟ್ಸ್

## ಎಲ್ಲರನ್ನೂ ಸಂಪರ್ಕಿಸುವ ಒಂದು ಉಪನಗರ ರೈಲು

ಬೆಂಗಳೂರು ಉಪನಗರ ರೈಲು ಯೋಜನೆ (BSRP) ನಗರ ಸಾರಿಗೆಯಲ್ಲಿ ಮಹತ್ವದ ಬದಲಾವಣೆಯನ್ನು ತರಲಿದೆ. ಪ್ರಯಾಣಿಕರಿಗೆ ಸುರಕ್ಷಿತ, ಸುಗಮ ಹಾಗೂ ಕಡಿಮೆ ವೆಚ್ಚದ ಆರಾಮದಾಯಕ ಪ್ರಯಾಣ ಅನುಭವವನ್ನು ಒದಗಿಸಲಿದೆ. ಇದಕ್ಕಾಗಿ ಕಮ್ಯೂನಿಕೇಷನ್ ಬೇಸ್ಡ್ ಟ್ರೈನ್ ಕಂಟ್ರೋಲ್ (CBTC) ಹಾಗೂ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ಸ್ (PSD) ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಿದೆ.

ಈ ಕೆಳಗಿನ ಚಿತ್ರಗಳು ಅಂಡರ್‌ಗ್ರೌಂಡ್ ನಿಲ್ದಾಣದಲ್ಲಿ PSD ಯ ವಿಶಿಷ್ಟ ವ್ಯವಸ್ಥೆಯನ್ನು ಮತ್ತು ಎತ್ತರದ/ಅಟ್ ಗ್ರೇಡ್ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ ಸ್ಕ್ರೀನ್ ಗೇಟ್‌ಗಳನ್ನು (PSG) ತೋರಿಸುತ್ತವೆ.






Figure-1 (PSD in an Underground Station)

### ಹೆಸರೇ ಸೂಚಿಸುವಂತೆ ಪ್ಲಾಟ್‌ಫಾರ್ಮ್ ಅಂಚಿನಲ್ಲಿ ಸ್ಥಾಪಿಸಲಾದ ಸ್ವಯಂಚಾಲಿತ

ಬಾಗಿಲುಗಳಾಗಿವೆ. ಇವುಗಳ ಪ್ರಾಥಮಿಕ ಉದ್ದೇಶ ಪ್ಲಾಟ್‌ಫಾರ್ಮ್ ಮತ್ತು ಹಳಿಗಳ ನಡುವೆ ತಡೆಗೋಡೆಯನ್ನು ಸೃಷ್ಟಿಸುವ ಮೂಲಕ ಸುರಕ್ಷತೆಯನ್ನು ಹೆಚ್ಚಿಸುವುದಾಗಿದೆ.. ಉದ್ದೇಶಪೂರ್ವಕ ಅಥವಾ ಉದ್ದೇಶಪೂರ್ವಕವಲ್ಲದ, ಹಳಿಗಳ ಮೇಲೆ ಬೀಳುವುದನ್ನು ತಡೆಯುವುದು ಇದರ ಮುಖ್ಯ ಕಾರ್ಯವಾಗಿದೆ.

ಇದು ಅಪಘಾತಗಳ ಅಪಾಯವನ್ನು ಕಡಿಮೆ ಮಾಡುತ್ತದೆ ಮತ್ತು ಪ್ರಯಾಣಿಕರ ಸುರಕ್ಷತೆಯನ್ನು ಹೆಚ್ಚಿಸುತ್ತದೆ. BSRP ಗಾಗಿ, ಎಲ್ಲಾ ನಿಲ್ದಾಣಗಳಲ್ಲಿ PSD ಗಳನ್ನು ಸ್ಥಾಪಿಸಲಾಗುತ್ತದೆ. ಅರ್ಧ ಎತ್ತರದ PSG ಗಳನ್ನು ಅಟ್ ಗ್ರೇಡ್/ಎತ್ತರದ ನಿಲ್ದಾಣಗಳಲ್ಲಿ ಸ್ಥಾಪಿಸಲಾಗುತ್ತದೆ. ಆದರೆ ಪೂರ್ಣ ಎತ್ತರದ PSD ಗಳನ್ನು ಅಂಡರ್‌ಗ್ರೌಂಡ್ ಸ್ಟೇಷನ್‌ಗಳಲ್ಲಿ ಸ್ಥಾಪಿಸಲಾಗುವುದು. ಪೂರ್ಣ ಎತ್ತರದ PSDಗಳು ನಿಲ್ದಾಣದೊಳಗೆ ಬಾಹ್ಯ ಗಾಳಿಯ ಪ್ರವೇಶವನ್ನು ತಡೆಯುವ ಮೂಲಕ ತಾಪಮಾನವನ್ನು ನಿಯಂತ್ರಿಸುವ ಹೆಚ್ಚುವರಿ ಪ್ರಯೋಜನವನ್ನು ಸಹ ನೀಡುತ್ತವೆ. ಇದು ಹವಾನಿಯಂತ್ರಣ ಶಕ್ತಿಯನ್ನು ಉಳಿಸಲು ಸಹಾಯ ಮಾಡುತ್ತದೆ ಮತ್ತು ವೆಚ್ಚ ಉಳಿತಾಯಕ್ಕೆ ಕಾರಣವಾಗುತ್ತದೆ. PSG ಯ ಪ್ರಸ್ತಾವಿತ ಎತ್ತರ 1.7 ಮೀ.ಆಗಿದೆ.

### ಕಾರ್ಯವಿಧಾನ

ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ಸ್ (PSDs) / ಪ್ಲಾಟ್‌ಫಾರ್ಮ್ ಸ್ಕ್ರೀನ್ ಗೇಟ್ಸ್ (PSGs)ಗಳು ರೈಲು ಬಾಗಿಲುಗಳೊಂದಿಗೆ ಸಮನ್ವಯದಲ್ಲಿ ಕಾರ್ಯನಿರ್ವಹಿಸುತ್ತವೆ. ಆನ್‌ಬೋರ್ಡ್ ಸಿಗ್ನಲಿಂಗ್ ವ್ಯವಸ್ಥೆಯಿಂದ ರೈಲು ಬಾಗಿಲು ತೆರೆಯುವ ಅಥವಾ ರೈಲು ಬಾಗಿಲು ಮುಚ್ಚುವ ಆದೇಶ ಸಂಕೇತಗಳನ್ನು ಸ್ವೀಕರಿಸಿದ ನಂತರ ಮಾತ್ರ ಪ್ಲಾಟ್‌ಫಾರ್ಮ್ ಸ್ಕ್ರೀನ್ ಬಾಗಿಲುಗಳ ತೆರೆಯುವಿಕೆ ಮತ್ತು ಮುಚ್ಚುವಿಕೆ ಕಾರ್ಯ ಸಕ್ರಿಯವಾಗಲಿದೆ. ನಿಗದಿತ ಮಿತಿಗಳ ಹೊರಗೆ ರೈಲು ನಿಂತಿರುವ ರೈಲು ನಿಂತ ಸಂದರ್ಭದಲ್ಲಿ, ಅಗತ್ಯವಿದ್ದರೆ, ರೈಲನ್ನು ಮರುಸ್ಥಾಪಿಸಲು ಮತ್ತು ಪ್ಲಾಟ್‌ಫಾರ್ಮ್ ಸ್ಕ್ರೀನ್ ಬಾಗಿಲುಗಳನ್ನು ಸರಿಯಾಗಿ ಇರಿಸಿದಾಗ ಸಾಮಾನ್ಯ ಕಾರ್ಯಾಚರಣೆಗೆ ಅನುವು ಮಾಡಿಕೊಡಲು ರೈಲು ನಿರ್ವಾಹಕರ ನಿಯಂತ್ರಣದ ಅವಕಾಶವನ್ನು ಸಹ ನೀಡಲಾಗಿದೆ.

### ಅಸಾಮಾನ್ಯ ಕಾರ್ಯಾಚರಣೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಬಾಗಿಲುಗಳ ಬಳಕೆ

ಯಾವುದೇ ವೈಫಲ್ಯದಿಂದಾಗಿ ಯಾವುದೇ ಪ್ಲಾಟ್‌ಫಾರ್ಮ್ ಸ್ಕ್ರೀನ್ ಬಾಗಿಲು ಸ್ವಯಂಚಾಲಿತವಾಗಿ ತೆರೆಯದಿದ್ದರೆ ರೈಲು ನಿರ್ವಾಹಕರು ಅಥವಾ ನಿರ್ವಹಣಾ ಸಿಬ್ಬಂದಿ ಪ್ಲಾಟ್‌ಫಾರ್ಮ್‌ನಲ್ಲಿರುವ ಸ್ಥಳೀಯ ನಿಯಂತ್ರಣ ಫಲಕವನ್ನು ಬಳಸಿಕೊಂಡು ಎಲ್ಲಾ ಪ್ಲಾಟ್‌ಫಾರ್ಮ್ ಸ್ಕ್ರೀನ್ ಬಾಗಿಲುಗಳನ್ನು ತೆರೆಯಬಹುದು ಅಥವಾ ಮುಚ್ಚಬಹುದು.



### PSD ವ್ಯವಸ್ಥೆಯು ಇವುಗಳನ್ನು ಒಳಗೊಂಡಿದೆ:

1. ಸ್ವಯಂಚಾಲಿತ ಸ್ಲೈಡಿಂಗ್ ಬಾಗಿಲುಗಳು
2. ತುರ್ತು ನಿರ್ಗಮನ ಬಾಗಿಲುಗಳು
3. ಸ್ಥಿರ ಫಲಕ
4. ಪ್ರದರ್ಶನ ಫಲಕ
5. ಹಳಿಗಳಿಗೆ ಪ್ರವೇಶ ದ್ವಾರ

### 1. ಸ್ವಯಂಚಾಲಿತ ಸ್ಲೈಡಿಂಗ್ ಬಾಗಿಲುಗಳು (Automatic Sliding Doors)

ತೆರೆಯುವಿಕೆ ಮತ್ತು ಮುಚ್ಚುವಿಕೆಯು ರೈಲು ಬಾಗಿಲುಗಳೊಂದಿಗೆ ಸಮಾನಾಗಿರುತ್ತದೆ. PSD ಗಳನ್ನು ಮುಚ್ಚುವಾಗ ಅಡಚಣೆ ಉಂಟಾದರೆ (ಉದಾ: ಪ್ರಯಾಣಿಕರಿಗೆ ಡಿಕ್ಕಿ, ಅಡಚಣೆ, ಇತ್ಯಾದಿ), PSD ಗಳು 3 ಪ್ರಯತ್ನಗಳ ನಂತರ ಕಾರ್ಯನಿರ್ವಹಿಸುವುದಿಲ್ಲ, ಇದರಿಂದಾಗಿ ರೈಲು ಚಲಿಸದಂತೆ ಅನುಮತಿಸುತ್ತದೆ ಮತ್ತು ಆದ್ದರಿಂದ ಸುರಕ್ಷತೆಯನ್ನು ಖಚಿತಪಡಿಸುತ್ತದೆ.

### 2. ತುರ್ತು ನಿರ್ಗಮನ ಬಾಗಿಲು (Emergency Egress Door)

ರೈಲು ಸರಿಯಾದ ಸ್ಥಾನದಲ್ಲಿ ನಿಲ್ಲದಿದ್ದರೆ ಮತ್ತು ತೆರೆದ ರೈಲಿನ ಬಾಗಿಲುಗಳು ಪ್ಲಾಟ್‌ಫಾರ್ಮ್ ಪರದೆಯ ಬಾಗಿಲುಗಳ ಮುಂದೆ ಇಲ್ಲದಿದ್ದರೆ, ತುರ್ತು ನಿರ್ಗಮನ ಬಾಗಿಲಿನ ಟ್ರ್ಯಾಕ್ ಬದಿಯಲ್ಲಿರುವ ತುರ್ತು ಪುಶ್ ಬಾರ್ ಅನ್ನು ಒತ್ತುವ ಮೂಲಕ ತುರ್ತು ನಿರ್ಗಮನ ಬಾಗಿಲನ್ನು ತೆರೆದು ಪ್ಲಾಟ್‌ಫಾರ್ಮ್‌ಗೆ ಇಳಿಯಬಹುದು (ಚಿತ್ರ 1 ನೋಡಿ)

### 3.ಸ್ಥಿರ ಫಲಕ (Fixed Panel)

ಮೆಟ್ರೋ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ ವ್ಯವಸ್ಥೆಯಲ್ಲಿನ "ಸ್ಥಿರ ಫಲಕ"ವೆಂದರೆ, ಚಲಿಸುವ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ಸ್‌ಗಳ ನಡುವಿನ ತೆರವುಗಳನ್ನು ಮುಚ್ಚುವಂತೆ ಅಳವಡಿಸಲಾದ ಸ್ಥಿರ ಗಾಜಿನ ಫಲಕವಾಗಿರುತ್ತದೆ. ಇದು ಪ್ಲಾಟ್‌ಫಾರ್ಮ್ ಅಂಚಿನುದ್ದಕ್ಕೂ ನಿರಂತರ ಅಡ್ಡಬೇಲಿ ರೂಪಿಸಿ, ಜನರು ಟ್ರ್ಯಾಕ್ ಪ್ರದೇಶ ಪ್ರವೇಶಿಸುವುದನ್ನು ತಡೆಯುತ್ತದೆ. ಮುಖ್ಯ ಡೋರ್ಸ್‌ಗಳು ತೆರೆಯಲ್ಪಟ್ಟಿದ್ದರೂ ಸಹ, ಈ ಸ್ಥಿರ ಫಲಕವು ಅಡ್ಡಬೇಲಿಯ ಸಮಗ್ರತೆಯನ್ನು ಕಾಪಾಡುತ್ತದೆ.



### 4.ಪ್ರದರ್ಶನ ಫಲಕ (Display Panel)




ಪ್ರದರ್ಶನ ಫಲಕಗಳು ರೈಲು ಚಲನೆಯ ಮಾಹಿತಿಯನ್ನು ಒದಗಿಸುವ ಮೂಲಕ ಸುರಕ್ಷತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಮತ್ತು ವಾಣಿಜ್ಯ ಜಾಹೀರಾತುಗಳ ಪ್ರದರ್ಶನದ ಮೂಲಕ ಪ್ರಯಾಣ ದರವಲ್ಲದ ಆದಾಯವನ್ನು ಗಳಿಸಬಹುದು.

### 5.ಟ್ರ್ಯಾಕ್ ಪ್ರವೇಶ ಬಾಗಿಲು (Access Door to Tracks)

ಟ್ರ್ಯಾಕ್ ಪ್ರದೇಶಕ್ಕೆ ಪ್ರವೇಶ ಕಲ್ಪಿಸುವ ಬಾಗಿಲುಗಳು ಸಾಮಾನ್ಯವಾಗಿ ಏಕಪತ್ರದ (Single Leaf) ಬಾಗಿಲುಗಳಾಗಿದ್ದು, ಕೀಲುಗಳ ಮೇಲೆ ಪ್ಲಾಟ್‌ಫಾರ್ಮ್ ದಿಕ್ಕಿನತ್ತ ತೆರೆಯುವಂತೆ ವಿನ್ಯಾಸಗೊಳಿಸಲ್ಪಟ್ಟಿರುತ್ತವೆ. ಇವುಗಳನ್ನು ಸಾಮಾನ್ಯವಾಗಿ ಪ್ಲಾಟ್‌ಫಾರ್ಮ್‌ನ ಕೊನೆಯ ಭಾಗದಲ್ಲಿ ಟ್ರ್ಯಾಕ್ ಬದಿಯ ಪ್ರವೇಶಕ್ಕಾಗಿ ಒದಗಿಸಲಾಗುತ್ತದೆ (ಚಿತ್ರ-1 ನೋಡಿ).

'ಸಂಪರ್ಕ' ಬಿ.ಎಸ್.ಆರ್.ಪಿ ಸುದ್ದಿ ಪತ್ರ, ವಿನ್ಯಾಸ, ಸಂಕಲನ ಮತ್ತು ಪ್ರಕಟಣೆ : ಸಾರ್ವಜನಿಕ ಸಂಪರ್ಕ ವಿಭಾಗ, ಕ ರೈಡ್
ನಿಮ್ಮ ಯಾವುದೇ ಸಲಹೆ / ಸೂಚನೆಗಳಿಗಾಗಿ ನಮಗೆ ಇಮೇಲ್ ಮಾಡಿ: kridepr@gmail.com